**ದಿನಾಂಕಃ 06-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎಂ.ಹೆಚ್.ಕೆ. ವಕೀಲರಿಂದಃ**

1. ನಾನು 30 ವರ್ಷಗಳಿಂದ ಬಾಂಡ ರೈಟರಾಗಿ ಕೆಲಸ ನಿರ್ಹಿಸುತ್ತಿದ್ದೇನೆ. ಮುಖ್ಯ ವಿಚಾರಣೆಯ ಸಂಗತಿಗಳನ್ನು ನಾನೆ ಹೇಳಿ ಬರೆಸಿರುತ್ತೇನೆ. ನನಗೆ ನ್ಯಾಯಾಲಯದಿಂದ ಸಮನ್ಸ ಬಂದಿದ್ದು, ಸದರಿ ಸಮನ್ಸನಲ್ಲಿ ಹಗ್ಗದ ವಕೀಲರಿಗೆ ಭೇಟಿಯಾಗಬೇಕೆಂದು ನಮೂದಿಸಿರುವುದಿಲ್ಲ. ಹಗ್ಗದ ವಕೀಲರ ಬಳಿ ಏಕೆ ಭೇಟಿಯಾಗಿರುತ್ತೀರಿ ಎಂದು ಹೇಳಲು ಬರುವುದಿಲ್ಲ. ನಿಪಿ-3 ರಲ್ಲಿ ಇರುವ ಪಕ್ಷಗಾರರು ಖುದ್ದಾಗಿ ಪರಿಚಯ ಇರುವುದಿಲ್ಲ. ಖರೀದಿ ಪತ್ರ ಮಾಡಿದರೆಂದು ಹೇಳುವ ಸಮಯದಲ್ಲಿ ಉತಾರೆಯನ್ನು ತಗೆದುಕೊಂಡು ಬಂದಿರುತ್ತಾರೆ. ನಿಪಿ-3 ರಲ್ಲಿ ಇರುವ ಹೆಬ್ಬಟ್ಟಿನ ಗುರುತಿಗೆ ನಾನೆ ಗುರುತಿಸಿರುತ್ತೇನೆ. ಹೆಬ್ಬಟ್ಟಿನ ಸಹಿಗಳನ್ನು ನಾನೆ ಗುರುತಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಿಪಿ-3 ನು ಬರೆಯಲು ಮಹಾದೇವಪ್ಪ ಪೂಜಾರಿ, ಹಣಮಂತ ಪೂಜಾರಿ, ನೀಲವ್ವ ಪೂಜಾರಿ, ಭೀಮಪ್ಪ ಪೂಜಾರಿ ಮಾಹಿತಿಯನ್ನು ನೀಡಿರುತ್ತಾರೆ. ಮಹಾದೇವಪ್ಪ ಪೂಜಾರಿಗೆ ವಯಸ್ಸಾಗಿರುವ ಕಾರಣ ಮಾಹಿತಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಮಹಾದೇವಪ್ಪ ಪೂಜಾರಿಗೆ ಯಾವಾಗಲು ಕುಡಿತದ ಅಮಲಿನಲ್ಲಿ ಇದ್ದು, ಆತನಿಗೆ ಮಾಹಿತಿ ತಿಳಿಸಿದೆ, ಆತನ ಖೊಟ್ಟಿ ಸಹಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-3 ರ ಸಮಯದಲ್ಲಿ ವಾದಿಯು ಮಹಾದೇವಪ್ಪನಿಗೆ 3 ಲಕ್ಷ ಹಣವನ್ನು ನೀಡಿರುತ್ತಾರೆ. ವಾದಿಯು ಮಹಾದೇವಪ್ಪನಿಗೆ 3 ಲಕ್ಷ ಹಣವನ್ನು ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೋಂದಣಿ ಮಾಡಿಸಿಕೊಡುವ ಜವಬ್ದಾರಿ ನಮ್ಮದು ಆಗಿರುವುದಿಲ್ಲ. ನೋಂದಣಿ ಮಾಡಿಸುವ ಸಮಯದಲ್ಲಿ ಪ್ರತಿವಾದಿಗೆ ಖರೀದ ಪತ್ರದ ಬಗ್ಗೆ ಮಾಹಿತಿ ಕೇಳಿದ್ದು, ಸದರಿಯವರು ಒಪ್ಪಿಕೊಂಡ ಮೇರೆಗ ಸಹಿ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ಸಾಕ್ಷಿದಾರರಾಗಿ ಚಂದ್ರಶೇಖರ ವಂದಾಲ, ಸಂಗಪ್ಪ ಅಬತೆ ರವರು ಸಹಿ ಮಾಡಿರುತ್ತಾರೆ. ಸದರಿಯವರು ವೈಯಕ್ತಿಕವಾಗಿ ಪರಿಚಯ ಇರುವುದಿಲ್ಲ. ಸದರಿಯವರು ಸಾಕ್ಷಿ ನುಡಿದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಮಹಾದೇವಪ್ಪನ ನಿಪಿ-3 ರಂತೆ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿಲ್ಲ, ಖೊಟ್ಟಿ ಸಹಿ ಪಡೆದುಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**